**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ನಂಜನಗೂಡು.**

**ಸಿ.ಸಿ.ನಂ.1211/2022**

ಫಿರ್ಯಾದುದಾರರುಃ ನಂಜನಗೂಡು ಪಟ್ಟಣ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ಪುಟ್ಟಸ್ವಾಮಿ

## ದೋಷಾರೋಪಣೆ

ನಂಜನಗೂಡಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶ್ರೀಮತಿ ಬಿ.ಅನುಪಮಲಕ್ಷ್ಮಿ ಬಿ.ಎ., ಎಲ್.ಎಲ್.ಬಿ., ಆದ ನಾನು ಈ ಕೆಳಕಂಡ ಆರೋಪಿಯಾದ,

ಪುಟ್ಟಸ್ವಾಮಿ ಬಿನ್ ಲೇಟ್ ಬಟಾಣಿ ಮಾದೇಗೌಡ,
46 ವರ್ಷ,
ವಾಸಃ ಹೊರಳವಾಡಿ ಗ್ರಾಮ,
ನಂಜನಗೂಡು ತಾಲ್ಲೂಕು.
ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 14-12-2021 ರಂದು ರಾತ್ರಿ 10-30 ರ ಸಮಯದಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣಾ ಸರಹದ್ದು, ಪಾಠ ಶಾಲಾ ಬೀದಿಯಲ್ಲಿರುವ ಸಾಕ್ಷಿ-1 ರವರ ಮನೆಗೆ ಆರೋಪಿಯಾದ ನೀವು ಹೋಗಿ ಬಾಗಿಲು ತಟ್ಟಿ ಸಾಕ್ಷಿ-1 ರವರನ್ನು ಮನೆಯ ಪಕ್ಕದಲ್ಲಿ ಇರುವ ಗಲ್ಲಿ ರಸ್ತೆಗೆ ಕರೆದುಕೊಂಡು ಹೋಗಿ ಸಾಕ್ಷಿ-1 ರವರ ಕತ್ತಿನಪಟ್ಟಿಯನ್ನು ಹಿಡಿದು ಅಕ್ರಮವಾಗಿ ತಡೆದು ಭಾರತೀಯ ದಂಡ ಸಂಹಿತೆ ಕಲಂ 341 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಎರಡನೆಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಸಾಕ್ಷಿ-1ರವರಿಗೆ ಬೋಳಿಮಗನೇ, ಸೂಳೆಮಗನೇ ಎಂದು ನಿಂದಿಸಿ ಹಾಗೂ ದಿನಾಂಕ 30-12-2021ರಂದು ಮಧ್ಯಾಹ್ನ 2-30ರ ಸಮಯದಲ್ಲಿ ನಂಜನಗೂಡು ಪಟ್ಟಣದ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಆರೋಪಿಯಾದ ನೀವು ಪುನಃ ಸಾಕ್ಷಿ-1ರವರಿಗೆ ಬೋಳಿ ಮಗನೆ, ಬಡ್ಡಿ ಮಗನೇ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಅಪಮಾನಗೊಳಿಸಿ, ಭಾರತೀಯ ದಂಡ ಸಂಹಿತೆ ಕಲಂ 504ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಮೂರನೆಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳಗಳಲ್ಲಿ, ಆರೋಪಿಯಾದ ನೀವು ಸಾಕ್ಷಿ-1ರವರಿಗೆ ಕೈಯಿಂದ ಬಲ ಕಪಾಳಕ್ಕೆ ಹೊಡೆದು ಹಾಗೂ ಬಲಕೆನ್ನೆಗೆ ಮತ್ತು ಕಿವಿಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 323ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಕೊನೆಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಸಾಕ್ಷಿ-1ರವರಿಗೆ ಜಮೀನಿನ ವಿಚಾರಕ್ಕೆ ಬಂದರೆ ಅದೇ ಜಮೀನಿನಲ್ಲಿ ನಿನ್ನನ್ನು ಪೆಟ್ರೋಲ್ ಹಾಕಿ ಸುಟ್ಟುಹಾಕುತ್ತೇನೆ ಎಂದು ಹೆದರಿಸಿ ಹಾಗೂ ದಿನಾಂಕ 26-12-2021ರಂದು ಬೆಳಿಗ್ಗೆ 10 ಗಂಟೆಯಲ್ಲಿ ಆರೋಪಿಯು ಸಾಕ್ಷಿ-1ರವರ ಮನೆಗೆ ಹೋಗಿ ಸಾಕ್ಷಿ-2ರವರ ಬಳಿ ನಿಮ್ಮ ಮಗ ಜಮೀನಿನ ವಿಚಾರಕ್ಕೆ ಬಂದರೆ ಅಂದೇ ಅವನ ಕೊನೆ ದಿನ ಎಂದು ತಿಳಿಸಿ ಕೊಲೆ ಬೆದರಿಕೆ ಹಾಕಿ ಭಾರತೀಯ ದಂಡ ಸಂಹಿತೆ ಕಲಂ 506ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 29.01.2024

(ಬಿ.ಅನುಪಮಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.